

# ಆರೋಹಿ ಆರೋಹಣ

‘ದೃಶ್ಯ’ ಚಿತ್ರದಲ್ಲಿ ರವಿಚಂದ್ರನ್ ಮಗಳ ಪಾತ್ರದಲ್ಲಿ ನಟಿಸುವ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ಹುಡುಗಿ ಆರೋಹಿ ನಾರಾಯಣ. ನಂತರ ಕೆಲವು ಕಾಲ ಇವರು ತೆರೆಯ ಮೇಲೆ ಕಾಣಿಸಿಕೊಂಡಿರಲಿಲ್ಲ. ‘ಭೀಮಸೇನ ನಳಮಹರಾಜ’ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸುವುದರೊಂದಿಗೆ ಮತ್ತೆ ನಟನೆಗೆ ಮರಳಿದ್ದರು. ಆ ಚಿತ್ರ ಮುಗಿಯುತ್ತಿದ್ದ ಹಾಗೆಯೇ ಆರೋಹಿ ಇನ್ನೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ.

ಆಕಾಶ್ ಶ್ರೀವತ್ಸ ನಿರ್ದೇಶಿಸುತ್ತಿರುವ ಚಿತ್ರದ ಮುಖ್ಯಪಾತ್ರವೊಂದಕ್ಕೆ ಅವರು ಆಯ್ಕೆಯಾಗಿದ್ದಾರೆ. ರಮೇಶ್ ಅರವಿಂದ್ ಚಿತ್ರದ ನಾಯಕ. ರಾಧಿಕಾ ಚೇತನ್ ಕೂಡ ಇನ್ನೊಂದು ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಇನ್ನೂ ಹೆಸರಿಡದ ಈ ಚಿತ್ರದಲ್ಲಿ ಆರೋಹಿ ಮನಃಶಾಸ್ತ್ರಜ್ಞೆಯಾಗಿ ನಟಿಸುತ್ತಿರುವುದು ವಿಶೇಷ. ರಮೇಶ್ ಅರವಿಂದ್ ಮತ್ತು ರಾಧಿಕಾ ಚೇತನ್ ಇಬ್ಬರ ಜತೆಗೂ ತೆರೆಯನ್ನು ಹಂಚಿಕೊಳ್ಳುವ ಪಾತ್ರ ಅವರದಂತೆ.

ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಆಗಿದ್ದು, ರಮೇಶ್ ಅರವಿಂದ್ ಅವರು ವಿಭಿನ್ನವಾದ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ಆಕಾಶ್ ಮತ್ತು ಅಭಿಜಿತ್ ವೈ.ಆರ್. ಈ ಚಿತ್ರದ ಕಥೆ ಬರೆದಿದ್ದಾರೆ. ಜ್ಯೂಡಾ ಸ್ಯಾಂಡಿ ಸಂಗೀತ ಸಂಯೋಜನೆ ಮಾಡಲಿದ್ದಾರೆ.

ಉಳಿದ ಪಾತ್ರಗಳಲ್ಲಿ ಯಾರು ಕಾಣಿಸಿಕೊಳ್ಳಲಿದ್ದಾರೆ ಎಂಬ ವಿಷಯವನ್ನು ಚಿತ್ರತಂಡ ಇನ್ನೂ ಬಿಟ್ಟುಕೊಟ್ಟಿಲ್ಲ. ಜನವರಿಯಲ್ಲಿ ಚಿತ್ರಕಥೆಯ ಕೆಲಸ ಪೂರ್ತಿಗೊಳಿಸಿ ಲೊಕೇಶನ್ ಹುಡುಕಾಟಕ್ಕಾಗಿ ಹೊರಡುವ ಯೋಜನೆಯಲ್ಲಿ ಆಕಾಶ್ ಇದ್ದಾರೆ.

# ಇದು ಮುಂದೆಂದೋ ನಡೆಯುವ ಕಥೆ!

ಚರಿತ್ರೆಯನ್ನು ಆಧರಿಸಿದ ಸಿನಿಮಾಗಳು, ಎಷ್ಟೋ ವರ್ಷಗಳ ಹಿಂದಿನ ಘಟನೆಯನ್ನು ಇಟ್ಟುಕೊಂಡು ಕಟ್ಟಿದ ಸಿನಿಮಾಗಳು ತೆರೆಯ ಮೇಲೆ ಭೋರ್ಗರೆಯುತ್ತಿರುವ ಸಮಯ ಇದು. ಎಲ್ಲರೂ ಹಿಂದಿನ ಕಾಲದಲ್ಲಿಯೇ ಕಣ್ಣುನೆಟ್ಟಿರುವಾಗ ಅನೂಪ್ ಭಂಡಾರಿ ಮಾತ್ರ ಇನ್ನೂರು ವರ್ಷ ಮುಂದಿನ ಭವಿಷ್ಯದಲ್ಲಿ ದೃಷ್ಟಿನೆಟ್ಟಿದ್ದಾರೆ. ಅವರ ಈ ಭವಿಷತ್ ಕನಸಿಗೆ ಕಿಚ್ಚ ಸುದೀಪ್ ಕೈಜೋಡಿಸಿದ್ದಾರೆ. ಏನಿದು ಕನಸು? ‘ಬಿಲ್ಲ ರಂಗ ಬಾಷ’ ಇದು ಕನಸಿನ ಹೆಸರು.

ಹೌದು, ‘ರಾಜರಥ’ದಲ್ಲಿ ಸೋತಿದ್ದ ಅನೂಪ್ ಮತ್ತು ‘ದಿ ವಿಲನ್’ನಲ್ಲಿ ಟುಸ್ ಪಟಾಕಿಯಾದ ಸುದೀಪ್ ಇಬ್ಬರೂ ಈಗ ಜೊತೆಯಾಗಿ ಸಿನಿಮಾ ಮಾಡುತ್ತಿದ್ದಾರೆ. ಅದು 2209ರಲ್ಲಿ ನಡೆಯುವ ಕಥೆಯಂತೆ. ಇತ್ತೀಚೆಗೆ ಬಿಡುಗಡೆ ಮಾಡಿದ ಪೋಸ್ಟರ್‌ನಲ್ಲಿಯೂ ಆ ಕಾಲವನ್ನು ಉಲ್ಲೇಖಿಸಲಾಗಿದೆ. ಸ್ವತಃ ಅನೂಪ್ ಕೂಡ ತಮ್ಮ ಟ್ವಿಟರ್ ಖಾತೆಯಲ್ಲಿ ಆ ಕುರಿತು ಹೇಳಿಕೊಂಡಿದ್ದಾರೆ.

ಇದು ಹದಿನೆಂಟು ವರ್ಷದ ಹಿಂದೆಯೇ ಬರೆದಿಟ್ಟುಕೊಂಡ ಕಥೆಯಂತೆ. ಆಗಲೂ ಅನೂಪ್ ಮನಸಲ್ಲಿ ಇದ್ದಿದ್ದು ಸುದೀಪ್. ಅವರ ಕನಸಿಗೀಗ ಹದಿಹರೆಯ. ತೆರೆಯ ಮೇಲೆ ವ್ಯಕ್ತಗೊಳ್ಳಲು ಸೂಕ್ತ ಸಮಯ ಎಂದು ಅನಿಸಿದೆ. ಕಥೆಯನ್ನು ಕೇಳಿದ ಕಿಚ್ಚ ಕೂಡ ಖುಷಿಯಿಂದಲೇ ಒಪ್ಪಿದ್ದಾರೆ. ಸುದೀಪ್ ಅವರೇ ಈ ಸಿನಿಮಾಗೆ ಹಣ ಹೂಡುತ್ತಿದ್ದಾರೆ. ಸದ್ಯಕ್ಕೆ ‘ಪೈಲ್ವಾನ್’ ಚಿತ್ರದ ಅಖಾಡದಲ್ಲಿ ಮೈದಣಿಸುತ್ತಿರುವ ಸುದೀಪ್, ಆ ಚಿತ್ರದ ನಂತರ ಬಿಲ್ಲ ರಂಗ ಬಾಷದಲ್ಲಿ ತೊಡಗಿಕೊಳ್ಳಬಹುದು.



ಅನೂಪ್ ಭಂಡಾರಿ



ಸುದೀಪ್

